# ಮೇರಿ–ಪಿಯೆರ್
## ಮೇಧಾವಿಗಳ ದಾಂಪತ್ಯಗೀತೆ

**ವಿಜ್ಞಾನಕ್ಕೆ ಬದುಕು ಮೀಸಲಿಟ್ಟಿದ್ದ ಮೇರಿಯನ್ನು ಪ್ರೀತಿಸಿ ದುಂಬಾಲು ಬಿದ್ದು ಮದುವೆಯಾದವರು ಪಿಯೆರ್! ಪ್ರೀತಿ, ಬುದ್ಧಿವಂತಿಕೆ ಎರಡನ್ನೂ ಬೆಸೆದುಕೊಂಡು ಮೂಡಿದ ಇವರ ಸುಂದರ ದಾಂಪತ್ಯಗೀತೆ ಅನಿರೀಕ್ಷಿತ ಅಂತ್ಯ ಕಂಡು ಮೇರಿಯನ್ನು ಜೀವನವಿಡೀ ಮೌನಕ್ಕೆ ನೂಕಿತ್ತು.**

■ **ಸಿಡ್ನಿ ಶ್ರೀನಿವಾಸ್**

ಜಗತ್ತು ಕಂಡ ಅದ್ವಿತೀಯ ವಿಜ್ಞಾನಿ ಮೇರಿ ಕ್ಯೂರಿ. ಫಿಸಿಕ್ಸ್ ಮತ್ತು ಕೆಮಿಸ್ಟ್ರಿ ಎರಡರಲ್ಲಿಯೂ ನೊಬೆಲ್ ಬಹುಮಾನ ಪಡೆದ ಏಕೈಕ ವ್ಯಕ್ತಿ (ಪುರುಷರೂ ಒಡಗೂಡಿ). ರೇಡಿಯೊ ಆಕ್ಟಿವಿಟಿ ಮತ್ತು ರೇಡಿಯಂ ಕಂಡುಹಿಡಿದ ವಿಜ್ಞಾನಿ.



ಮೇರಿ ಕ್ಯೂರಿ ಜನಿಸಿದ್ದು ಪೋಲೆಂಡಿನ ವಾರ್ಸಾ ನಗರದಲ್ಲಿ. ಬಡಕುಟುಂಬವಾದರೂ ಮೇರಿ ಅವರ ತಂದೆ ವಿದ್ಯೆಗೆ ಮೊದಲ ವಂದನೆ ಸಲ್ಲಿಸಿದವರು. ಹೀಗಾಗಿ ಅವರ ಮಕ್ಕಳೆಲ್ಲರೂ ಓದಿನಲ್ಲಿ ಮುಂದಾದರು. ಶಾಲೆಯಲ್ಲಿ ಸದಾ ಪ್ರಥಮ ಸ್ಥಾನ ಗಳಿಸಿದರು ಮರಿಯಾ (ಮುಂದೆ ಇವರು ಮೇರಿಯಾದರು). ಶಾಲಾಭ್ಯಾಸ ಮುಗಿದ ನಂತರ ಕಾಲೇಜು ಓದುವಾಸೆ. ಆದರೆ ಅಂದು ಪೋಲೆಂಡಿನ ಕಾಲೇಜುಗಳಲ್ಲಿ ಹೆಂಗಸರಿಗೆ ಪ್ರವೇಶವಿರಲಿಲ್ಲ. ಪ್ಯಾರಿಸ್‌ನತ್ತ ಹೋಗುವುದೊಂದೇ ದಾರಿ ಎನಿಸಿತು. ಅದಕ್ಕಾಗಿ ಹಣಗಳಿಸಲು ಅವರು ಜೊರೌಸ್ಕಿ ಕುಟುಂಬದ ಮಕ್ಕಳ ಪಾಲಕಿಯಾಗಿ ಕೆಲಕಾಲ ಕೆಲಸ ಮಾಡಿದರು. ಆಗ ಕುಟುಂಬದ ಸುಪುತ್ರ ಕಾಜಿಮಿಯೆರ್ಜ್ ಜೊತೆ ಪ್ರೇಮ ಬೆಳೆಯಿತು. ಆದರೆ ಗೆಳೆಯನ ಶ್ರೀಮಂತ ತಂದೆ–ತಾಯಿ ಮದುವೆಗೆ ಸಮ್ಮತಿ ನೀಡದೆ ಮೇರಿ ಹತಾಶರಾದರು.

ಪ್ಯಾರಿಸ್ಸಿಗೆ ಹೋಗಿ ಅಲ್ಲಿನ ಸೊರ್ಬಾನ್ ವಿಶ್ವವಿದ್ಯಾಲಯ ಸೇರಿದ ಮೇರಿ ಅಲ್ಲಿ ತಮ್ಮ ದಿಗ್ವಿಜಯ ಸಾಧಿಸಿದರು. ಅಲ್ಲಿಯೂ ಮೊದಲ ಸ್ಥಾನ! ಮಿಕ್ಕ ವಿದ್ಯಾರ್ಥಿಗಳು ದಂಗಾದರು.

ಉಕ್ಕಿನ ಅಯಸ್ಕಾಂತ ಗುಣಗಳ ಅಧ್ಯಯನ ಮಾಡಲು ಫ್ರೆಂಚ್ ಸರ್ಕಾರ ಮೇರಿಗೆ 1400 ಫ್ರ್ಯಾಂಕುಗಳ ಅನುದಾನ ನೀಡಿತು. ಎಲ್ಲೆಡೆ ಅವರ ಬಗ್ಗೆ ಅಸೂಯೆ. 'ಹುಡುಗಿ, ಅದರಲ್ಲೂ ಪರದೇಶದ ಹುಡುಗಿ ಮೊದಲ ಸ್ಥಾನ ಗಳಿಸುವುದೇ? ಅದೂ ಫಿಸಿಕ್ಸ್‌ನಲ್ಲಿ! ಅವಳಿಗೆ ಅನುದಾನವೇ?' ಇಂತಹ ಕಾರಣಗಳಿಂದಾಗಿ ವಿಶ್ವವಿದ್ಯಾಲಯದ ಅಧಿಕಾರಿಗಳು ಮೇರಿಗೆ ಅಧ್ಯಯನ ಮಾಡಲು ಸೂಕ್ತ ಸ್ಥಳ ನೀಡಲಿಲ್ಲ. ಪ್ರಯೋಗಗಳನ್ನು ಎಲ್ಲಿ ಮಾಡುವುದು?

ಆಗ ಮೇರಿಯ ಸ್ನೇಹಿತರೊಬ್ಬರು ಒಂದು ಸಲಹೆ ನೀಡಿದರು: 'ಸೊರ್ಬಾನಿನ ಫಿಸಿಕ್ಸ್ ವಿಭಾಗದಲ್ಲಿ ಪಿಯೆರ್ ಕ್ಯೂರಿ ಎಂಬ ಪ್ರತಿಭಾವಂತರಿದ್ದಾರೆ. ನೀನು ಹೋಗಿ ಅವರೊಡನೆ ಮಾತನಾಡು. ಅವರು ನಿನಗೆ ನೆರವು ನೀಡಬಲ್ಲರು.'

1894ರ ವಸಂತ. ಮೇರಿ ಪಿಯೆರ್ ಅವರನ್ನು ಭೇಟಿ ಮಾಡಹೋದರು. ತನ್ನ ಪ್ರಯೋಗಾಲಯದ ಕಿಟಕಿ ಬಳಿ ನಿಂತಿದ್ದ ಪಿಯೆರ್ ಆ ವೇಳೆಗಾಗಲೇ ತಮ್ಮ ಕೊಡುಗೆಗಳಿಂದ ಹೆಸರು ಗಳಿಸಿದ್ದರು. ಮೊದಲ ಬಾರಿಗೆ ಪಿಯೆರ್ ಅವರನ್ನು ಸಂಧಿಸಿದಾಗ ಅವರ ಅನಿಸಿಕೆಗಳನ್ನು ಮೇರಿ ಬರೆದಿಟ್ಟಿದ್ದಾರೆ.

'ಆಗಲೇ 35 ವರ್ಷಗಳಾಗಿದ್ದರೂ ಅವನು ಇನ್ನೂ ಚಿಕ್ಕವನಾಗಿ ಕಂಡ. ಅವನ ದೃಷ್ಟಿಯಲ್ಲಿದ್ದ ಖಚಿತತೆಯನ್ನು ಮತ್ತು ಪ್ರಸಿದ್ಧನೆನಿಸಿದ್ದರೂ ಅವನಲ್ಲಿದ್ದ ತುಸು ಅಸಡ್ಡೆ, ಉಡಾಫೆಯನ್ನು ಕಂಡು ನಾನು ಅವಾಕ್ಕಾದೆ. ಅವನಿಂದ ಹೊರಟ ಮಂದಗತಿಯ ಆಲೋಚನಾಪರ ಪದಗಳು, ಅವನ ಸರಳತೆ, ಶಿಶುಸಹಜ ನಗು, ಯಾರಿಗಾದರೂ ಭರವಸೆಯನ್ನು ಮೂಡಿಸುತ್ತಿದ್ದವು.'

ಇಬ್ಬರೂ ವಿಜ್ಞಾನ, ಸಮಾಜ, ಮಾನವೀಯ ವಿಷಯಗಳಲ್ಲದೇ ತಂತಮ್ಮ ದೇಶಗಳ ಬಗ್ಗೆಯೂ ಮಾತನಾಡಿದರು. ಆದರೆ ಪಿಯೆರ್, ಮೇರಿ ಬಯಸಿದಂತೆ ಪ್ರಯೋಗಗಳಿಗೆ ಬೇಕಿದ್ದ ಸ್ಥಳವನ್ನು ನೀಡಲಿಲ್ಲ; ಅವರಿಗೆ ತಮ್ಮದೇ ಆದ ಪ್ರಯೋಗಶಾಲೆ ಇರಲಿಲ್ಲ. ಬದಲಾಗಿ ತಾವು ಮತ್ತು ತಮ್ಮ ಅಣ್ಣ